ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗೆ ತುಂಬ ಸ್ಪಷ್ಟವಾಗಿ ಉತ್ತರ ಕೊಡಲಾಗಿದೆ. ಹಾರಂಗಿ ನಾಲಾ ವಿಭಾಗ ಕಛೇರಿಯನ್ನು ಕೆ.ಆರ್. ನಗರದಿಂದ ಸಾಲಿಗ್ರಾಮಕ್ಕೆ ಸ್ಥಳಾಂತರಿಸುವುದು ನಿಜವೇ? ಎಂದು ಕೇಳಿದ್ದಾರೆ. 'ಇಲ್ಲ' ಎಂದು ಹೇಳಿದ್ದೇನೆ. ಸ್ಥಳಾಂತರಿಸಲು ಕಾರಣವೇನು? ಎಂದು ಕೇಳಿದ್ದಕ್ಕೆ 'ಉದ್ಭವಿಸುವುದಿಲ್ಲ' ಎಂದು ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ತುಂಬ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ, ಪ್ರಭಾವಿ ರಾಜಕಾರಣಿಗಳ ಮಧ್ಯೆ ಮಾನ್ಯ ಮಹದೇವರವರು ಕೂಡ ಬರುತ್ತಾರೆ. ಅದರಲ್ಲೇನೂ ಅನುಮಾನವಿಲ್ಲ. ನಾನು ತುಂಬ ಸ್ಪಷ್ಟವಾಗಿ ಇವತ್ತು ಉತ್ತರ ಕೊಟ್ಟಿದ್ದೇನೆ, ಸದ್ಯಕ್ಕೆ ಇದನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವ ಪ್ರಶ್ನೆ ಇಲ್ಲ.

ಶ್ರೀ ಎಂ. ಮಹದೇವ: ಸಧ್ಯಕ್ಕೆ ಇಲ್ಲ ಎಂದು ಹೇಳಿದಿರಿ. ಮುಂದೆ?

ಶ್ರೀ ಕೆ.ಎಸ್. ಈಶ್ವರಪ್ಪ: ಮುಂದೆ ಪ್ರಪಂಚದಲ್ಲಿ ಏನೇನು ಆಗುತ್ತದೋ ನೋಡೋಣ. ಈವಾಗ ಅಂತೂ ಇಲ್ಲ.

ಶ್ರೀ ಎಂ. ಮಹದೇವ: ನಿಮ್ಮ ಅವಧಿಯಲ್ಲಿ ಇಲ್ಲವೇ?

ಸಾಗರ ತಾಲ್ಲೂಕಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗದಿರುವುದು

232 (1309) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಗರ ತಾಲ್ಲೂಕಿನ ನಕ್ಸಲ್ ಪ್ರದೇಶವಾದ ತುಂಬ್ರ ಮತ್ತು ಕೈಕೊಡ್ ಪ್ರದೇಶದಲ್ಲಿ ಹತ್ತು ಸಾವಿರ ಜನಸಂಖ್ಯೆ ಇದ್ದರೂ, ಇದುವರೆವಿಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದುವರೆವಿಗೂ ಕಾಲೇಜು ಸ್ಥಾಪಿಸದಿರಲು ಕಾರಣಗಳೇನು ಹಾಗೂ ಯಾವಾಗ ಸ್ಥಾಪಿಸಲಾಗುವುದು ;

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) –

ಅ) ಹೌದು

ಆ) ಮತ್ತು ಇ) ಶೈಕ್ಷಣಿಕ ಅಗತ್ಯತೆ ಹಾಗೂ ಪ್ರಸಕ್ತ ಸಾಲಿನ ಆಯವ್ಯಯದ ಲಭ್ಯತೆಗೆ ಅನುಗುಣವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ನಾನು ಪದವಿಪೂರ್ವ ಕಾಲೇಜು ಬಗ್ಗೆ ಕೇಳಿದ್ದೆ. ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಏಕೆಂದರೆ, 18000 ಜನಸಂಖ್ಯೆಯುಳ್ಳ ಹಿರಿಯ ಭಾಸ್ಕರ ಮತ್ತು ಶರಾವತಿ ಡ್ಯಾಂನಿಂದ ಮುಳುಗಡೆಯಾದಂಥ ಪ್ರದೇಶ ಆದಾಗಿದೆ. ಹಿಂದುಳಿದ ಪ್ರದೇಶ ಹಾಗೂ ನಕ್ಸಲ್ ಪ್ರದೇಶವಾದ್ದರಿಂದ ಆ ಭಾಗಕ್ಕೆ 30 ಕಿ.ಮೀ. ವ್ಯಾಪ್ತಿಯಲ್ಲಿ ಒಂದೂ ಕೂಡ ಕಾಲೇಜು ಇಲ್ಲ. ಅದನ್ನು ಕೊಡುತ್ತೇವೆಂದು ಮಾನ್ಯ ಸಚಿವರು ನಮಗೆ ಭರವಸೆಯನ್ನು ಕೊಡಬೇಕು. ಏಕೆಂದರೆ, ಅಲ್ಲಿ ಬಹಳ ಬಡವರು ಇರುವುದರಿಂದ ಮಕ್ಕಳು ಪ್ರತಿವರ್ಷ ಶಾಲೆ ಬಿಡುತ್ತಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಹೊರಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿರುವುದು ಸತ್ಯವಾಗಿದೆ. ಅಲ್ಲಿಗೆ ಕಾಲೇಜನ್ನು ಮಂಜೂರು ಮಾಡಿಕೊಡಬೇಕಾಗಿತ್ತು. ಏಕೆಂದರೆ, ನಕ್ಸಲ್ ಪೀಡಿತ ಪ್ರದೇಶಗಳು ಮತ್ತು 30 ಕಿ.ಮೀ. ದೂರದಿಂದ ಮಕ್ಕಳು ಬರುವುದಕ್ಕೆ ಬಸ್ಸು ಸಿಗುವುದಿಲ್ಲ. ಇಂಥ ಅನೇಕ ತೊಂದರೆಗಳನ್ನು ನಾನು ಚರ್ಚೆ ಮಾಡುವಾಗ ನಮ್ಮ ಗಮನಕ್ಕೆ ಬಂದಿದೆ. But, ಏನೆಂದರೆ, ನಮಗೆ ಬಹಳ ಈ ಸಾರಿ 130 ಕಾಲೇಜು ಕೊಟ್ಟದ್ದನ್ನು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಕೊಡಬೇಕು, ಎಲ್ಲೆಲ್ಲಿ ಕಡಿಮೆ ಇವೆ ಅವನ್ನೆಲ್ಲಾ ಮಾಡಬೇಕೆನ್ನುವಾಗ, ಕೆಲವು ಕಡೆ ಹೆಚ್ಚು ಕಡಿಮೆಯಾಗಿದೆ. ಮತ್ತೆ ನಾವು ಹೆಚ್ಚಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಪ್ರಸ್ತಾವನೆ ಬಂದ ನಂತರ ಖಂಡಿತವಾಗಿ ಅವರು ಕೇಳಿದಂತೆ ಕಾಲೇಜನ್ನು ಇದೇ ವರ್ಷ ಮಂಜೂರು ಮಾಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು: ಮಾನ್ಯ ಅಧ್ಯಕ್ಷರೆ, ಕಾಲೇಜು ಶೀಘ್ರ ಮಂಜೂರು ಮಾಡಬೇಕೆಂದು ಏಕೆ ಹೇಳುತ್ತಿದ್ದೆನೆಂದರೆ, ಹಾಸ್ಟೆಲ್ ಅಲ್ಲಿ ಕೊಡಲಿಕ್ಕೆ ಆಗುವುದಿಲ್ಲ. 140 ಮಕ್ಕಳು ಸಾಗರ ಸಿಟಿಗೆ ಬರಬೇಕೆಂದು ಹೇಳಿದರೆ, ಹಾಸ್ಟೆಲ್ ಅಲ್ಲಿ ಕೊಡಲಿಕ್ಕೆ ಆಗುವುದಿಲ್ಲ. ಶಾಲಾ ಮಕ್ಕಳು ಶಾಲೆ ಬಿಡುತ್ತಿದ್ದಾರೆ. ದಯವಿಟ್ಟು ಅದನ್ನು ಮಾಡಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಈಗ ಒಂದು ವಾರದಲ್ಲಿ ಬರೆದಿದ್ದೇವೆ. ಬಂದ ತಕ್ಷಣ ಮಂಜೂರು ಮಾಡುವ ಕೆಲಸವನ್ನು ಮಾಡುತ್ತೇವೆ.

ಬ್ರಹ್ಮಾವರ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸುವುದು

233 (802) : ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ 2006–07ನೇ ಸಾಲಿನಲ್ಲಿ ಎಷ್ಟು ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ;

ಆ) ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು (ವಿವರ ನೀಡುವುದು) ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) –

ಅ) 2006–07ನೇ ಸಾಲಿಗೆ ಸರ್ವ ಶಿಕ್ಷಾ ಅಭಿಯಾನದಡಿ ಬ್ರಹ್ಮಾವರ ವಿಧಾನಸಭಾ ಕ್ಷೇತ್ರಕ್ಕೆ ಹೆಚ್ಚುವರಿ ಕೊಠಡಿಗಳು ಮಂಜೂರು ಆಗಿರುವುದಿಲ್ಲ.

2006–07ನೇ ಸಾಲಿಗೆ ಪ್ರೌಢಶಾಲಾ ಕೊಠಡಿ ನಿರ್ಮಾಣದ ಬಗ್ಗೆ ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವಡ್ಡರಸೆ ಬನ್ನಡಿ ಗ್ರಾಮದ ಪ್ರೌಢಶಾಲೆಗೆ ಐದು ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಈ ಕಾಮಗಾರಿಗೆ ರೂ. 9.20 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಅಧ್ಯಕ್ಷರೆ, 2006–07ನೇ ಸಾಲಿಗೆ ಸರ್ವ ಶಿಕ್ಷಾ ಅಭಿಯಾನದಡಿ ಬ್ರಹ್ಮಾವರ ವಿಧಾನಸಭಾ ಕ್ಷೇತ್ರ ಮಾತ್ರವಲ್ಲ. ಇಡೀ ಜಿಲ್ಲೆಗೆ ಹಣವನ್ನು ಕೊಟ್ಟಿಲ್ಲ. ಇಡೀ ಜಿಲ್ಲೆಯ ಶಾಸಕರಾದ ನಾವು ತಮ್ಮ ಹತ್ತಿರ ಚರ್ಚೆಯನ್ನು ಮಾಡಿದ್ದೇವೆ. ದಯವಿಟ್ಟು ಈ ಬಾರ ಬೇರೆ ಎಲ್ಲ ಜಿಲ್ಲೆಗೆ ಕೊಟ್ಟ ಹಾಗೆ ಸರ್ವ ಶಿಕ್ಷಾ ಅಭಿಯಾನದ ಹಣದ ಅನುದಾನವನ್ನು ನಮ್ಮ ಜಿಲ್ಲೆಗೂ ಕೂಡ ಕೊಡಿಸುವ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಸರ್ವ ಶಿಕ್ಷಾ ಅಭಿಯಾನದಲ್ಲಿ 13627 ಕೊಠಡಿಗಳು ಈ ಸಲ ಮಂಜೂರಾಗಿವೆ. ಮಾನ್ಯ ಶಾಸಕರು ಹೇಳಿದ ಹಾಗೆ ಬ್ರಹ್ಮಾವರ ವಿಧಾನಸಭಾ ಕ್ಷೇತ್ರಕ್ಕೆ 85 ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಡಬೇಕೆನ್ನುವಂಥದ್ದು ನಮ್ಮದೊಂದು ಕಾಳಜಿ ಇದೆ. ಆದರೆ, ಅಲ್ಲಿ ಏನಾಗಿದೆಯೆಂದರೆ, ನಾವು ಕಳುಹಿಸಿದಂಥ 195.50 ಲಕ್ಷ ಬಿಡುಗಡೆ ಮಾಡಲೂ ಸಹಿತ ನಾವು ಉದ್ದೇಶ ಹೊಂದಿದ್ದೇವೆ. ಆದರೆ ಅದು ಏನಾಯಿತು ಎಂದರೆ, '2004–05 AIMF ಮಾಹಿತಿ ಪ್ರಕಾರ ಉಡುಪಿ ಜಿಲ್ಲೆಗೆ ಯಾವುದೇ ಹೆಚ್ಚುವರಿ